# ಮೈತ್ರಿ ಧ್ಯಾನ

ಒಮ್ಮೆ ತಥಾಗತರ ಶಿಷ್ಯನಾದ ಅನುರುದ್ಧ ಹೊಲದ ಪಕ್ಕದ ಹೆದ್ದಾರಿಯಲ್ಲಿ ನಡೆದು ಹೋಗುತ್ತಿದ್ದ. ಆಸುಪಾಸಿನ ಒಂದು ಹೊಲದಲ್ಲಿ ಸುದತ್ತ ಎನ್ನುವ ಬ್ರಾಹ್ಮಣ ಯುವಕ ಉಳುಮೆ ಮಾಡುತ್ತಿದ್ದ. ಅದು ಆ ಊರಿನ ಶ್ರೀಮಂತನಾದ ಸುಭೂತಿಗೆ ಸೇರಿದ ಹೊಲವಾಗಿತ್ತು. ಇದ್ದಕ್ಕಿದ್ದಂತೆ ಉಳುತ್ತಿದ್ದ ನೇಗಿಲು ಹೊಲದ ಅಂಚಿನಲ್ಲಿದ್ದ ಮೊಲದ ಗೂಡಿಗೆ ಹೊಡೆಯಿತು. ಗೂಡು ಕುಸಿದು ಮರಿಗಳು ಚೆಲ್ಲಾಪಿಲ್ಲಿಯಾದವು. ಕೂಡಲೇ ತಾಯಿ ಮೊಲ ಜಿಗಿದು ಓಡಲು ಪ್ರಾರಂಭಿಸಿತು. ಸ್ವಲ್ಪ ದೂರ ಹೋಗುತ್ತಲೇ ತನ್ನ ಮರಿಗಳನ್ನು ನೆನೆಸಿಕೊಂಡು ಆತಂಕದಿಂದ ಹಿಂದಕ್ಕೆ ಓಡಿಬಂದು ಮರಿಗಳನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸಿತು. ಸುದತ್ತ ಹಿಡಿದಿದ್ದ ಬಾರುಕೋಲನ್ನು ಎತ್ತಿ ಮೊಲವನ್ನು ಅಟ್ಟಿಸಿಕೊಂಡು ಹೋಗಿ ಅದನ್ನು ಕೊಲ್ಲಲು ಪ್ರಯತ್ನ ಮಾಡುತ್ತಿದ್ದ.

ಇದನ್ನು ಗಮನಿಸಿದ ಹೆದ್ದಾರಿಯಲ್ಲಿ ಹೋಗುತ್ತಿದ್ದ ಶ್ರಮಣ ಭಿಕ್ಕು ದನಿ ಎತ್ತರಿಸಿ, 'ತಡೆ ಮಿತ್ರ, ಈ ಬಡಪಾಯಿ ಮೊಲ ಏನು ತಪ್ಪು ಮಾಡಿದೆ? ಅದನ್ನು ಕೊಲ್ಲುವ ಕಾರಣವೇನು?' ಎಂದು ಕೇಳಿದ.

ಸುದತ್ತ 'ಈ ಮೊಲ ನನ್ನ ಒಡೆಯನ ಜಮೀನಿನಲ್ಲಿ ವಾಸ ಮಾಡುತ್ತಾ ಇದೆ. ಅದನ್ನು ಬಿಟ್ಟರೆ ಬೇರೆ ಯಾವ ತಪ್ಪನ್ನು ಮಾಡಿಲ್ಲ' ಎಂದ.

ಬೋಳಿಸಿದ ತಲೆ, ಶಾಂತ ಮುಖಭಾವ ಅವನೊಬ್ಬ ಶ್ರಮಣ ಎನ್ನುವುದನ್ನು ಸಾರಿ ಹೇಳುತ್ತಿತ್ತು. ಸುದತ್ತನ ನೇರವಾದ ಮಾತು ಅವನಿಗೆ ಹಿಡಿಸಿತು. ಅಮಾಯಕನಂತಿದ್ದ ಯುವಕನನ್ನು 'ಬಹುಶಃ ಈ ಮೊಲದ ಮಾಂಸವನ್ನು ತಿನ್ನುವುದಕ್ಕೆ ಆಸೆ ಪಡುತ್ತಿರುವೆಯಾ' ಎಂದು ಕೇಳಿದ.

ಶ್ರಮಣನ ಮಾತಿಗೆ ಸುದತ್ತ 'ಇಲ್ಲ ಇಲ್ಲ, ಮರಿಹಾಕುವ ಸಮಯದಲ್ಲಿ ಮಾಂಸ ತಿನ್ನುವುದಕ್ಕೆ ಚೆನ್ನಾಗಿರುವುದಿಲ್ಲ. ನಾನು ತಮಾಷೆಗೆ ಆ ಮೊಲವನ್ನು ಅಟ್ಟಿಸಿಕೊಂಡು ಹೋದೆ. ಮೊಲಗಳು ಬಹಳ ಚುರುಕಾಗಿರುತ್ತವೆ. ನನ್ನಂತಹ ಹುಡುಗರನ್ನು ಬಿಟ್ಟರೆ ಅವುಗಳ ಹಿಂದೆ ಯಾರೂ ಓಡಲಾರರು' ಎಂದ.

ಅನುರುದ್ಧ ಮುಂದುವರೆದು 'ಮಿತ್ರನೇ, ನೀನೇ ತಾಯಿಯಾಗಿ ಯಾರಾದರೂ ಒಬ್ಬ ರಾಕ್ಷಸ ನಿನ್ನ ಮಕ್ಕಳನ್ನು ಕೊಂದು, ನಿನ್ನನ್ನು ಕೊಲ್ಲುವುದಕ್ಕೆ ಹೀಗೆಯೇ ಅಟ್ಟಿಸಿಕೊಂಡು ಬಂದಿದ್ದರೆ ಹೇಗಿರುತ್ತಿತ್ತು ಎಂಬುದನ್ನು ಊಹೆ ಮಾಡಿಕೊ!' ಎಂದ.

ಅದಕ್ಕೆ ಸುದತ್ತ 'ಅವನು ನನ್ನನ್ನು ಕೊಲ್ಲಲು ಬರುತ್ತಿದ್ದರೆ ನಾನು ಅವನೊಂದಿಗೆ ಹೋರಾಟ ಮಾಡುತ್ತಿದ್ದೆ' ಎಂದು ಉತ್ತರಿಸಿದ.

ಮತ್ತೆ ಶ್ರಮಣನು 'ನೀನು ತುಂಬ ಧೈರ್ಯಶಾಲಿ. ಯಾರಾದರೂ ತಂದೆ ತಾಯಿ ಮಕ್ಕಳು ಹಾಗೂ ನಿನ್ನ ಪ್ರಿಯರಾದವರನ್ನೆಲ್ಲ ಕೊಂದು ಹಾಕಿ ನಿನ್ನನ್ನು ಮಾತ್ರ ಉಳಿಸಿ ನಿನ್ನ ದುಃಸ್ಥಿತಿಯನ್ನು ಅಣಕಿಸಿಕೊಳ್ಳುವಂತಹ ಪರಿಸ್ಥಿತಿ ಮೊಲಕ್ಕೆ ಬಂದ ಹಾಗೆ ನಿನಗೂ ಬಂದಿದ್ದರೆ ಹೇಗೆನಿಸುತ್ತಿತ್ತು ಎಂದು ಊಹೆ ಮಾಡಿಕೋ' ಎಂದ.

ಸುದತ್ತನಿಗೆ ನಾಚಿಕೆಯಾಯಿತು. ಅವನು ಇಂತಹ ವಿಚಾರಗಳಿಗೆ ಎಂದೂ ತಲೆ ಕೆಡಿಸಿಕೊಂಡಿರಲಿಲ್ಲ. ತನಗಿಂತ ದುರ್ಬಲವಾದ ಪ್ರಾಣಿಗಳ ಬಗ್ಗೆ ದಯೆ ತೋರಿಸುತ್ತಿರಲಿಲ್ಲ. ತನ್ನ ಸಂತೋಷಕ್ಕೋಸ್ಕರ ಬೇರೆಯವರಿಗೆ ನೋವುಂಟು ಮಾಡುವುದಕ್ಕೆ ಹಿಂಜರಿಯುತ್ತಿರಲಿಲ್ಲ. ಅವನು ಉದಾತ್ತ ಗುಣವುಳ್ಳವನು, ಮಹತ್ವಾಕಾಂಕ್ಷಿಯೂ, ಸಾಹಸಿಯೂ ಆಗಿದ್ದರೂ ಈ ಒಂದು ವಿಚಾರದಲ್ಲಿ ದುರ್ಬಲನಾಗಿದ್ದ. ಅವನಿಗೆ ಸರಿಯಾದ ಮಾರ್ಗದರ್ಶನ ಇಲ್ಲದಿದ್ದುದೇ ಅದಕ್ಕೆ ಕಾರಣವಾಗಿತ್ತು. ಶ್ರಮಣ ಅನುರುದ್ಧರ ಈ ಭೇಟಿ ಸುದತ್ತನಿಗೆ ಒಂದು ನಿರ್ಣಾಯಕ ಸಂದರ್ಭವಾಗಿತ್ತು. ತನ್ನ ಪೌರುಷ, ಧೈರ್ಯ, ಅನಿಯಂತ್ರಿತವಾದ ಶಕ್ತಿ ಪ್ರವಾಹ ಸಮಾಜಕ್ಕೆ ಕೆಡುಕನ್ನೇ ಉಂಟು ಮಾಡುತ್ತಿದೆ ಎಂದವನಿಗೆ ಅರಿವಾಯಿತು.

ಆಗ ಅನುರುದ್ಧ ಸುದತ್ತನ ಕಡೆಗೆ ತಿರುಗಿ ಹೀಗೆ ಹೇಳಿದ. 'ತಥಾಗತರು ಪ್ರಾಣಿಗಳ ವಿಷಯದಲ್ಲಿ ಹೇಗೆ ನಡೆದುಕೊಳ್ಳಬೇಕೆಂದು ಹೇಳಿರುವುದು ನಿನಗೆ ಗೊತ್ತಿಲ್ಲವೇ. ಅವರು ಹೀಗೆಂದು ಹೇಳಿದ್ದಾರೆ. 'ಮಿತ್ರತ್ವದಿಂದ ಈ ವಿಶ್ವ ತುಂಬಿರಲಿ; ಎಲ್ಲ ಜೀವಿಗಳು ಸಣ್ಣಪುಟ್ಟ ಹಾಗೂ ಬಲಿಷ್ಠ ಪ್ರಾಣಿಗಳು ತಮಗೆ ಹಾನಿಯನ್ನುಂಟುಮಾಡುವಂತಹ ಯಾವುದೇ ಸಂಗತಿಯನ್ನು ಅವು ಕಾಣದಿರಲಿ; ಆಗ ಅವು ಶಾಂತಿಯ ಪಥವನ್ನು ಅರಿತುಕೊಳ್ಳುತ್ತವೆ'. ಇದೇ 'ಮೈತ್ರಿ ಧ್ಯಾನ'. ತಥಾಗತರು ಈ ನೆಲ, ಜಲ, ಆಕಾಶದಲ್ಲಿರುವ ಸಕಲ ಜೀವರಾಶಿಗಳನ್ನು ಕುರಿತು ಹೀಗೆಯೆ ಧ್ಯಾನಿಸುತ್ತಾರೆ.

'ಈ ಮೊಲವೂ, ಪ್ರಪಂಚದಲ್ಲಿರುವ ಇತರ ಎಲ್ಲ ಜೀವಿಗಳಂತೆಯೆ ಬದುಕು ಸಾಗಿಸುತ್ತದೆ ಹಾಗೂ ನೀನು ಅನುಭವಿಸುತ್ತಿರುವಂತಹ ಕೋಮಲ ಭಾವನೆಗಳು ಅದಕ್ಕೂ ಇದೆ. ನಿನ್ನ ಹಾಗೆಯೇ ಬಾಲ್ಯ, ಯೌವನ, ವೃದ್ಧಾಪ್ಯ, ಸಾವು ನೋವುಗಳನ್ನು ಅದು ಅನುಭವಿಸುತ್ತದೆ. ಎಲ್ಲ ಸಮಯದಲ್ಲಿಯೂ ನೀನು ಶಕ್ತಿವಂತನಾಗಿ, ಆರೋಗ್ಯವಂತನಾಗಿ ಇರಲಿಲ್ಲ. ಕೆಲವು ವರ್ಷಗಳ ಹಿಂದೆ ನೀನು ಅಸಹಾಯಕ ಪುಟ್ಟ ಮಗುವಾಗಿದ್ದೆ, ನಿನ್ನ ತಾಯಿಯ ಪ್ರೀತಿಯ ಆರೈಕೆ, ನಿನ್ನ ತಂದೆಯ ಅಕ್ಕರೆಯ ರಕ್ಷಣೆ ಇಲ್ಲದೆ ಹೋಗಿದ್ದರೆ, ನೀನು ಇಂದು ಬದುಕಿರುತ್ತಿರಲಿಲ್ಲ. ತಾಯಿಯ ಹಾಲು ಕುಡಿಯುತ್ತಿದ್ದ ಆ ದಿನಗಳನ್ನು ಜ್ಞಾಪಿಸಿಕೊ. ಈ ಮೊಲದ ಮರಿಗಳು ಅದೇ ಸ್ಥಿತಿಯಲ್ಲಿ ಈಗ ಇಲ್ಲವೆ? ನಿನ್ನ ತಾಯಿಯ ಗರ್ಭದಲ್ಲಿ ಸಂರಕ್ಷತವಾಗಿದ್ದ ಏನೂ ಅರಿಯದ ಆ ಸ್ಥಿತಿಯನ್ನು, ಮತ್ತು ಇಂದಿನದನ್ನು ಕುರಿತು ಯೋಚಿಸು" ಎಂದ ಆ ಶ್ರಮಣ.

'ಪೂಜ್ಯರೇ, ನೀವು ಒಳ್ಳೆಯ ಗುರುಗಳು, ನಿಮ್ಮಿಂದ ಕಲಿಯಬೇಕೆಂದು ಸಂಕಲ್ಪಿಸಿದ್ದೇನೆ' ಎಂದ ಸುದತ್ತ ದೈನ್ಯತೆಯಿಂದ ಗುರುವನ್ನು ಹಿಂಬಾಲಿಸಿದ.

■ ಮೂಚಿ

## ಮಾತೇ ಮುತ್ತು

★ ನಿಮ್ಮಿಂದ ಸಾಧ್ಯ ಇರುವುದಕ್ಕಿಂತ ಹೆಚ್ಚಿನದನ್ನು ಕೊಡುವುದೇ ಉದಾರತೆ. ನಿಮ್ಮಿಂದ ಸಾಧ್ಯ ಇರುವುದಕ್ಕಿಂತ ಕಡಿಮೆ ಪಡೆದುಕೊಳ್ಳುವುದೇ ಹೆಮ್ಮೆ.

ಖಲೀಲ್ ಗಿಬ್ರಾನ್

★ ಹೆಚ್ಚು ಹೆಚ್ಚು ಕಾನೂನು ಮತ್ತು ಕಠಿಣ ನಿಯಂತ್ರಣಗಳನ್ನು ಮಾಡಿದಷ್ಟೂ ಕಳ್ಳರು ಮತ್ತು ದರೋಡೆಕೋರರ ಸಂಖ್ಯೆ ಹೆಚ್ಚಾಗುತ್ತದೆ.

ಲಾವೊ ತ್ಸು

★ ಕಷ್ಟದಲ್ಲಿರುವ ಮನುಷ್ಯನ ಉಪದೇಶವನ್ನು ಯಾವತ್ತೂ ನಂಬಬೇಡ.

ಈಸೋಪ

★ ಒಳ್ಳೆಯ ಮನುಷ್ಯನಾಗುವುದು ಬೇರೆ, ಒಳ್ಳೆಯ ನಾಗರಿಕನಾಗುವುದು ಬೇರೆ.

ಅರಿಸ್ಟಾಟಲ್

★ ಜಗತ್ತಿನಾದ್ಯಂತ ಅಗಾಧ ಸಂಖ್ಯೆಯ ಸುಳ್ಳುಗಳು ತಿರುಗಾಡುತ್ತಿವೆ. ದುರದೃಷ್ಟದ ಸಂಗತಿಯೆಂದರೆ ಅವುಗಳಲ್ಲಿ ಅರ್ಧದಷ್ಟು ಸತ್ಯವಾಗುತ್ತದೆ.

ವಿನ್‌ಸ್ಟನ್ ಚರ್ಚಿಲ್

★ ಹುಚ್ಚನಾಗುವುದೇ ಆದಲ್ಲಿ ಪ್ರಾಪಂಚಿಕ ಸುಖಕ್ಕಾಗಿ ಹುಚ್ಚನಾಗಬೇಡ; ದೇವರ ಪ್ರೇಮದ ಸಲುವಾಗಿ ಹುಚ್ಚನಾಗು.

ರಾಮಕೃಷ್ಣ ಪರಮಹಂಸ

★ ಎಲ್ಲ ಬಗೆಯ ವ್ಯಸನವೂ ಕೆಟ್ಟದ್ದೇ. ಅದು ಮಾದಕ ಪದಾರ್ಥವಾಗಿರಲಿ ಅಥವಾ ಐಡಿಯಾಲಜಿ ಆಗಿರಲಿ!

—ಕಾರ್ಲ್ ಜಂಗ್

★ ಪ್ರತೀಕಾರದ ಪಯಣಕ್ಕೆ ಹೊರಡುವ ಮುನ್ನ ಎರಡು ಗೋರಿಗಳನ್ನು ತೋಡಿ ಇಡಿ.

ಕನ್‌ಫ್ಯೂಶಿಯಸ್

★ ಹಳೆಯ ದುಃಖಗಳಿಗಾಗಿ ಹೊಸ ಕಣ್ಣೀರನ್ನು ವ್ಯರ್ಥ ಮಾಡಬೇಡ.

ಯೂರಿಪಿಡಸ್

★ ಯುವ ವೈದ್ಯ ಮತ್ತು ಮುದುಕ ಕ್ಷೌರಿಕನ ಬಗ್ಗೆ ಸದಾ ಎಚ್ಚರದಿಂದಿರಿ.

ಬೆಂಜಮಿನ್ ಫ್ರಾಂಕ್ಲಿನ್

★ ಹೃದಯದೊಳಗೆ ಒಂದು ವಿಷಯವನ್ನು ಅಡಗಿಸಿಟ್ಟು ಇನ್ನೊಂದು ವಿಷಯದ ಬಗ್ಗೆ ಮಾತನಾಡುವ ಗೆಳೆಯನನ್ನು ತಿರಸ್ಕರಿಸಿ.

—ಹೋಮರ್